ನಾಟಕ ಇದೆ. ನಾಟಕ ಅರ್ಧಕ್ಕೆ ನಿಂತಿತು. ಹೀಗೆ ಜೀವನ ನಾಟಕ ಯಾವಾಗ ನಿಲ್ಲುತ್ತದೆಯೋ ಗೊತ್ತಿಲ್ಲ.

ಒಮ್ಮೆ ನನ್ನೂರಿನ ಸಹ ಕಲಾವಿದೆ ರೇಣುಕಾ ಒಂದೂರಲ್ಲಿ 'ಕುರುಕ್ಷೇತ್ರ' ನಾಟಕದಲ್ಲಿ ಅಭಿನಯಿಸಲು ಒಪ್ಪಿಕೊಂಡಿದ್ದಳು. ಅನಾರೋಗ್ಯದಿಂದ ಅವಳಿಗೆ ಹೋಗಲು ಸಾಧ್ಯವಾಗಲೇ ಇಲ್ಲ. ನನ್ನನ್ನು ಹೋಗುವಂತೆ ವಿನಂತಿಸಿಕೊಂಡಳು. ನನ್ನ ಅಪ್ಪನೂ ತೀವ್ರ ಅಸ್ವಸ್ಥರಾಗಿದ್ದರು. ಭಾರವಾದ ಹೃದಯದಿಂದ ಹೋದೆ. ನಾಟಕ ಮುಗಿಸಿ ಮೇಕಪ್ ತೆಗೆಯುವ ಹೊತ್ತಿಗೆ ಅಪ್ಪನ ಸಾವಿನ ಸುದ್ದಿ. ಬಣ್ಣ ಕಳಚುವಷ್ಟೂ ತಾಳ್ಮೆ ನನಗಿರಲಿಲ್ಲ. ಒಬ್ಬರ ಬದಲಿಗೆ ಪಾತ್ರ ಮಾಡಲು ಹೋಗಿ ಅಪ್ಪನ ಸಾವಿನ ಕ್ಷಣದಲ್ಲಿ ಪಕ್ಕದಲ್ಲಿ ನಾನಿರಲು ಆಗಲಿಲ್ಲ. ನಿಲ್ಲಬೇಕಾದ ನಾಟಕ ನನ್ನ ಪಾತ್ರವೊಂದರಿಂದ ಯಶಸ್ವಿಯಾಯಿತಲ್ಲ. ನಿಜ. ಆದರೆ ತಂದೆ ಸಾವಿನ ದುಃಖ. ಕೊನೆತನಕ ಕಾಡುವಂತದ್ದು. ಹೀಗೆ ಒಮ್ಮೆ ಪಡೆದರೆ ಇನ್ನೊಮ್ಮೆ ಕಳೆದುಕೊಳ್ಳುವುದು ನಡದೇ ಇರುತ್ತದೆ. ನಾನು ಅಂದು ರಂಗ ಮಂಚದ ಮೇಲೆ ಆಡಿದ ನಾಟಕ 'ಕುರುಕ್ಷೇತ್ರ' ಮುಗಿದ ಮೇಲೆಯೂ ನನ್ನ ಒಳಗೂ 'ಕುರುಕ್ಷೇತ್ರ' ನಡೆಯುತ್ತಿತ್ತು. ಹೇಳಿ... ಜೀವನ-ನಾಟಕ ಬೇರೆ ಬೇರೆ ಹೇಗೆ?

◆ **ಮಹಿಳಾ ಕಲಾವಿದರು ಅಪರೂಪಕ್ಕೆ ರಂಗ ತಂಡ ಕಟ್ಟುವುದು. ಅಲ್ಲಿ ಇಲ್ಲಿ ಒಬ್ಬರು ರಂಗ ತಂಡ ಕಟ್ಟಿಕೊಂಡ ಉದಾಹರಣೆಗಳಿವೆ. ಅಂತಹುದರಲ್ಲಿ 'ಮರಿಯಮ್ಮನ ಹಳ್ಳಿ ಮಹಿಳಾ ರಂಗ ಕಲಾವಿದರ ತಂಡ' ಕಟ್ಟಿ ಮಹಿಳೆಯರಿಂದಲೇ ಅನೇಕ ನಾಟಕಗಳನ್ನು ತರಬೇತಿಗೊಳಿಸಿ ಆಡಿಸಿದ್ದೀರಿ. ನೀವೇ ನಿರ್ದೇಶಕಿಯಾಗಿಯೂ ನಾಟಕದ ಯಶಸ್ಸಿಗೆ ಕಾರಣರಾಗಿದ್ದೀರಿ. ನಿಮ್ಮ ಈ ಮಹಿಳಾ ರಂಗ ತಂಡದ ಪಯಣದ ಕುರಿತು ವಿವರಿಸುವಿರಾ?**

ನನಗೆ ಆಗಲೇ ಸಂಪೂರ್ಣವಾಗಿ ರಂಗ ತಂತ್ರಗಳ ಕುರಿತು ಸಾಕಷ್ಟು ಅನುಭವವಾಗಿತ್ತು. ಅಲ್ಲದೇ ಮರಿಯಮ್ಮನಹಳ್ಳಿ ನಮ್ಮೂರಿನ ಲಲಿತ ಕಲಾ ರಂಗ ತಂಡದಲ್ಲಿ ಸಕ್ರಿಯವಾಗಿದ್ದೆ. ನಾವು ಕೆಲವು ಆಸಕ್ತ ಕಲಾವಿದೆಯರು ಸೇರಿ, ಹೊಸಬರಾಗಿ ಬರುವ ರಂಗಾಸಕ್ತ ಯುವಕ ಯುವತಿಯರಿಗೆ ಏನಾದರೂ ಮಾರ್ಗದರ್ಶನ ನೀಡಬೇಕೆನಿಸಿತ್ತು. ಮಳೆಗಾಲದಲ್ಲಿ ಸುಗ್ಗಿ ಸಮಯದಲ್ಲಿ ಹಳ್ಳಿಗಳಲ್ಲಿ ನಾಟಕಗಳನ್ನು ಏರ್ಪಡಿಸುತ್ತಿರಲಿಲ್ಲ. ಸಮಯವನ್ನು ವಿನಾಃ ಕಾರಣ ಕಳೆಯಲು ನಮಗೆ ಮನಸಿರಲಿಲ್ಲ. ಅದಕ್ಕಾಗಿ ರಂಗ ತಂಡ ಹುಟ್ಟು ಹಾಕಿ ಅನೇಕರಿಗೆ ರಂಗ ಶಿಬಿರ ನಡೆಸಿದೆವು. ಇನ್ನೊಂದು ಕಾರಣ, ಒಮ್ಮೆ ಕೆಲವು ಪುರುಷ ಕಲಾವಿದರು ತುಂಬಾ ನೋವು ಮಾಡಿದರು. ಆಗ ನಮ್ಮದೇ ಒಂದು ಮಹಿಳಾ ತಂಡ ಇರಲಿ ಎನಿಸಿತು. ಇದರ ಫಲವಾಗಿ 1997ರಲ್ಲಿ ಮಹಿಳಾ ವೃತ್ತಿ ರಂಗ ಕಲಾವಿದರ ಸಂಘ ಸ್ಥಾಪಿಸಿದ್ದು. ಈಗ ಅದರ ಮೂಲಕ ನಾಟಕ, ಶಿಬಿರ, ಸಂಕಿರಣ, ಉತ್ಸವಗಳು ನಿರಂತರವಾಗಿ ಸಾಕಷ್ಟು ನಡೆದಿವೆ.

ಹಾಡು, ನೃತ್ಯ, ನೇಪಥ್ಯದ ಕೆಲಸ, ಎಲ್ಲವನ್ನೂ ಹೇಳಿ ಕೊಡುತ್ತಿದ್ದೆವು. ನಮ್ಮ ರಂಗ ತಂಡದಿಂದ ಅನೇಕ ನಾಟಕಗಳನ್ನು ಆಡಿಸಿದೆವು. ಮಾ.ಬ. ಸೋಮಣ್ಣನವರೇ ಬರೆದು ನಿರ್ದೇಶಿಸಿದ 'ಶಾಕುಂತಲಾ' ನಾವು ಪ್ರದರ್ಶಿಸಿದ ಪ್ರಥಮ ನಾಟಕ. ಇದರಲ್ಲಿ ದುಷ್ಯಂತ ಪಾತ್ರವನ್ನು ನಾನೇ ಮಾಡುತ್ತಿದ್ದೆ. ಬಳ್ಳಾರಿ ಜಿಲ್ಲೆಯ ಕಲಾವಿದೆಯರೇ ಸೇರಿಕೊಂಡು 1978ರಲ್ಲೇ ಬೆಳಗಲ್ ವೀರಣ್ಣನವರ ನಿರ್ದೇಶನದಲ್ಲಿ 'ರಕ್ತರಾತ್ರಿ' ನಾಟಕವಾಡಿದೆವು. ತಬಲಾಜಿ ಹನುಮಂತಪ್ಪ ಹೆಚ್ಚಿನ ಜವಾಬ್ದಾರಿ ಹೊತ್ತುಕೊಂಡಿದ್ದರು. ಮಹಿಳೆಯರೇ ಅಭಿನಯಿಸಿದ ಈ ನಾಟಕಕ್ಕೆ ಒಳ್ಳೆಯ ಹೆಸರು ಬಂತು. ಕಂಪ್ಲಿ ವಾದಿರಾಜರ ನಿರ್ದೇಶನದಲ್ಲಿ 'ಶ್ರೀಕೃಷ್ಣ ತುಲಾಭಾರ' ಮಾಡಿದೆವು. ಹೊಸ ನಾಟಕವಾದರೂ ಮೆಚ್ಚುಗೆ ಪಡೆಯಿತು. ಚಿಂತ್ರಪಳ್ಳಿ ಶೇಷಾದ್ರಿ ನಿರ್ದೇಶನದಲ್ಲಿ 'ರೊಚ್ಚಿಗೆದ್ದ ರೈತ' ನಾಟಕ ಹೊಸಪೇಟೆಯಲ್ಲಿ ಒಂದು ತಿಂಗಳು ಪ್ರದರ್ಶನ ಕಂಡಿತು. 'ಹೇಮರಡ್ಡಿ ಮಲ್ಲಮ್ಮ' ನಾಟಕದಲ್ಲಿ ಸುಭದ್ರಮ್ಮ ಮನ್ಸೂರು ಅವರು ಹೇಮರೆಡ್ಡಿ ಮಲ್ಲಮ್ಮನಾಗಿ ಪಾತ್ರ ನಿಭಾಯಿಸಿದರೆ ನಾನು ಮಲ್ಲಿಕಾರ್ಜುನನ ಪಾತ್ರ ಮಾಡುತ್ತಿದ್ದೆ. ಅವರ ಅತ್ತೆ ಪಾತ್ರವನ್ನು ಬಾರಿಗಿಡದ ಉಮಾರಾಣಿ ಮಾಡುತ್ತಿದ್ದರು. ಈ ಪ್ರದರ್ಶನಗಳಿಗೆ ಪ್ರೇಕ್ಷಕರು ಕಿಕ್ಕಿರಿದು ಸೇರುತ್ತಿದ್ದರು. ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ರಂಗಭೂಮಿ ಮತ್ತು ಜೋಗತಿ ನೃತ್ಯಕಲಾವಿದೆ ಮಂಜಮ್ಮ ಜೋಗತಿಯವರು ನಮ್ಮ ರಂಗ ತಂಡದಲ್ಲಿ 'ಮೋಹಿನಿ ಭಸ್ಮಾಸುರ'ದಲ್ಲಿ ಭಸ್ಮಾಸುರ ಪಾತ್ರದಲ್ಲಿ ಅದ್ಭುತವಾಗಿ ಅಭಿನಯಿಸಿದ